# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಸಿ ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1115**

**ಉತ್ತರಿಸಬೇಕಾದ ದಿನಾಂಕ** : **12-03-2026**

**ಉತ್ತರಿಸಬೇಕಾದ ಸಚಿವರು** : **ಸನ್ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮೀಣ ರೈತರ ಆಧಾರ ಸ್ತಂಭವಾಗಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪ್ಯಾಕ್ಸ್) ಬಡ್ಡಿ ವಹಿವಾಟು ಮಾರ್ಜಿನ್ ಹಣವನ್ನು ಶೇ.3 ರಿಂದ ಶೇ.1.75 ಕ್ಕೆ ಇಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸಹಕಾರ ಸಂಸ್ಥೆಗಳು ಅಲ್ಪಾವಧಿ ಕೃಷಿ ಸಾಲಗಳನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಹಾಗೂ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳನ್ನು ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆಯಡಿಯಲ್ಲಿ ಸರ್ಕಾರದ ಪತ್ರ ಸಂಖ್ಯೆ ಸಿಒ 186 ಸಿಎಲ್‌ಎಸ್ 2025, ದಿನಾಂಕ:20.09.2025 ರಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ನಿಗದಿಪಡಿಸುತ್ತಿದ್ದ ಮಾರ್ಜಿನ್ ಮೊತ್ತವನ್ನು 2023-24 ನೇ ಸಾಲಿನಲ್ಲಿ ನಿಗದಿಪಡಿಸಿದ ಶೇ.2 ನ್ನು ಕಡಿಮೆ ಮಾಡಿ 2024-25ನೇ ಸಾಲಿಗೆ ಶೇ.1.75 ಕ್ಕೆ ನಿಗದಿ ಪಡಿಸಿರುತ್ತದೆ. |
| ಆ) | ಈ ಮಾರ್ಜಿನ್ ಹಣದ ಕಡಿತದಿಂದಾಗಿ ರಾಜ್ಯದ ಸಾವಿರಾರು ಪ್ಯಾಕ್ಸ್ ಸಂಘಗಳು ದೈನಂದಿನ ನಿರ್ವಹಣೆಗೆ (ಸ್ಟೇಷನರಿ, ಸಂಬಳ ಇತ್ಯಾದಿ) ಹಣವಿಲ್ಲದೆ ಮುಚ್ಚುವ ಸ್ಥಿತಿ ತಲುಪಿರುವುದು ನಿಜವೇ: | ಪ್ರೋ.ವೈದ್ಯನಾಥನ್ ಸಮಿತಿ ಶಿಫಾರಸ್ಸಿನನ್ವಯ ನಬಾರ್ಡ್ ಪ್ಯಾಕ್ಸ್‌ಗಳಿಗೆ ನಿಗದಿಪಡಿಸಿದ ಮಾನವ ಸಂಪನ್ಮೂಲಗಳ ನೀತಿಯನ್ನು ಅಳವಡಿಸಿಕೊಳ್ಳಬೇಕಿದ್ದು, ಅದರಲ್ಲಿನ 'Capacity to Pay' ಮಾನದಂಡಗಳನ್ವಯ ಪ್ಯಾಕ್ಸ್ ಗಳು ಸಂಘದ ನಿವ್ವಳ ಬಡ್ಡಿ ಆದಾಯದಲ್ಲಿ ಶೇ.0.50 ರಷ್ಟು ಮಾತ್ರ ಆಡಳಿತ ವೆಚ್ಚವಾಗಿ ಭರಿಸಲು ಸೂಚಿಸಲಾಗಿದ್ದರಿಂದ 0.25 ಬಡ್ಡಿ ಸಹಾಯಧನ ಕಡಿಮೆಯಾದಲ್ಲಿ ಸಂಘದ ಲಾಭ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆಯೇ ಹೊರತು ಸ್ಟೇಷನರಿ, ಸಂಬಳ ಇತ್ಯಾದಿಗೆ ಹಣವಿಲ್ಲದೆ ಮುಚ್ಚುವ ಸ್ಥಿತಿ ತಲುಪುವ ಪ್ರಮೇಯ ಉದ್ಭವವಾಗುವುದಿಲ್ಲ. |
| ಇ) | ಕೃಷಿ ಸಾಲ ಹಂಚಿಕೆಗೆ ಮಾತ್ರ ಅವಕಾಶ ನೀಡಿ, ಉಳಿದ ವಾಣಿಜ್ಯ ವ್ಯವಹಾರಗಳಿಗೆ ನಿರ್ಬಂಧ ವಿಧಿಸಿರುವುದರಿಂದ ಸಂಘಗಳಿಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪ್ಯಾಕ್ಸ್‌ಗಳು ವಾಣಿಜ್ಯ ವ್ಯವಹಾರಗಳನ್ನು ಕೈಗೊಳ್ಳಲು ನಿರ್ಬಂಧ ಇರುವುದಿಲ್ಲ. ಬದಲಾಗಿ ಈ ಹಿಂದಿನಿಂದಲೂ ಪ್ಯಾಕ್ಸ್‌ಗಳು ಕೃಷಿ ಸಾಲ ವಿತರಣೆಯೊಂದಿಗೆ ಸದಸ್ಯರಿಂದ ಠೇವಣಿಯನ್ನು ಸ್ವೀಕರಿಸಿ ಕೃಷಿಯೇತರ ಸಾಲ ವಿತರಿಸಲು ಮತ್ತು ಪತ್ತೇತರ ಚಟುವಟಿಕೆಗಳನ್ನು ಕೈಗೊಳ್ಳಲು ವ್ಯಾಪಾರ |

| | | |
|---|---|---|
| | | ಅಭಿವೃದ್ಧಿ ಯೋಜನೆಯನ್ನು (ಬಿಡಿಪಿ) ಹಮ್ಮಿಕೊಂಡು ಅದರನ್ವಯ ಆದಾಯ ಉತ್ತಮಗೊಳಿಸಲು ಉತ್ತೇಜಿಸಲಾಗುತ್ತಿದೆ.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ಪ್ಯಾಕ್ಸ್ ಗಳ ಗಣಕೀಕರಣ ಯೋಜನೆಯಡಿಯಲ್ಲಿ ರಾಜ್ಯದ 5491 ಪ್ಯಾಕ್ಸ್ ಗಳಿಗೆ ಗಣಕೀಕರಣಗೊಳಿಸಲಾಗುತ್ತಿದ್ದು, ಈ ಪ್ಯಾಕ್ಸ್‌ಗಳಲ್ಲಿ ವ್ಯಾಪಾರ ಅಭಿವೃದ್ಧಿ ಮೂಲಕ ಆದಾಯ ವೃದ್ಧಿಗೊಳಿಸಲು ಕೇಂದ್ರ ಸರ್ಕಾರ ರೂಪಿಸಿದ ಈ ಕೆಳಕಂಡ ಉಪ ಕ್ರಮಗಳನ್ನು (Initiatives) ಅಳವಡಿಸಿಕೊಳ್ಳಲು ಸಹ ಈಗಾಗಲೇ ಇಲಾಖಾಧಿಕಾರಿಗಳ ಮೂಲಕ ಎಲ್ಲಾ ಪ್ಯಾಕ್ಸ್ ಗಳಿಗೆ ತಿಳಿಸಲಾಗಿದೆ.<br><br>1. ಪ್ಯಾಕ್ಸ್‌ಗಳಲ್ಲಿ ಜನೌಷಧಿ ಕೇಂದ್ರಗಳನ್ನು ತೆರೆಯುವುದು.<br>2. ಪ್ಯಾಕ್ಸ್‌ಗಳು ಮಲ್ಟಿ ಸರ್ವೀಸ್ ಸೆಂಟರ್ಸ್ ಗಳಾಗಿ ಕೆಲಸ ನಿರ್ವಹಿಸುವುದು.<br>3. ಪ್ಯಾಕ್ಸ್‌ಗಳಲ್ಲಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ತೆರೆಯುವುದು.<br>4. ಪ್ಯಾಕ್ಸ್ ಗಳಲ್ಲಿ ವಿಶ್ವದ ಅತಿ ದೊಡ್ಡ ಧಾನ್ಯ ಸಂಗ್ರಹಿಸಲು ಉಗ್ರಾಣ ಯೋಜನೆ.<br>5. ಪ್ಯಾಕ್ಸ್‌ಗಳನ್ನು ಎಲ್‌ಪಿಜಿ ಹಾಗೂ ಪೆಟ್ರೋಲ್ ಗಳ ವಿತರಕರನ್ನಾಗಿ ಪರಿವರ್ತಿಸುವುದು. |
| ಈ) | ಈ ಬಿಕ್ಕಟ್ಟನ್ನು ಬಗೆಹರಿಸಲು ಮಾರ್ಜಿನ್ ಹಣವನ್ನು ಪುನಃ ಶೇ.3ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ನೆರೆಯ ರಾಜ್ಯಗಳಾದ ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಪ್ಯಾಕ್ಸ್ ಗಳಿಗೆ ಮಾರ್ಜಿನ್ ಕ್ರಮವಾಗಿ ಶೇ.0.75, ಶೇ.1.25, ಶೇ.1.80 ಮತ್ತು ಶೇ.2 ರಷ್ಟಿರುವ ಮಾಹಿತಿ ಇದ್ದು, ಶೇ.1.75 ಕ್ಕಿಂತ ಹೆಚ್ಚಿನ ವ್ಯವಹಾರ ಹೊಂದಿರುವ ಪ್ಯಾಕ್ಸ್‌ಗಳ ದುಡಿಯುವ ಬಂಡವಾಳ ಮತ್ತು ವ್ಯವಹಾರ ವೆಚ್ಚದ ಮಾಹಿತಿಯನ್ನು ನೀಡಲು ಇಲಾಖಾಧಿಕಾರಿಗಳಿಗೆ ತಿಳಿಸಿದ್ದು, ಸಂಘಗಳ ಹಿತದೃಷ್ಟಿಯಿಂದ ಮಾರ್ಜಿನ್ ದರವನ್ನು ಈಗಿರುವ ಶೇ.1.75 ರಿಂದ ಶೇ.3 ಕ್ಕೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು. |

**ಕಡತ ಸಂಖ್ಯೆ: ಸಿಒ 77 ಸಿಎಲ್ಎಸ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ